ಶಿಕ್ಷಕರ ಹುದ್ದೆಗೆ ಅರ್ಜಿಯನ್ನು ಹಾಕಿದರು. ಅದರಲ್ಲಿ ಎಂಟು ಮಂದಿ ಹಿಂದುಳಿದ ವರ್ಗದವರು ಆಯ್ಕೆಯಾಗಿದ್ದಾರೆ. ಆ ಎಂಟು ಮಂದಿ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ವಾಸ್ತವ್ಯ ಹೂಡಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಮಾಣ ಸಿಂಧುತ್ವ ಪತ್ರವನ್ನು ಕೊಡುವುದಕ್ಕೆ ಅವರ ತಂದೆ ತಾಯಿಗಳು ಕೇರಳದಲ್ಲಿರುವುದರಿಂದ ಅದನ್ನು ರಿಜೆಕ್ಟ್ ಮಾಡಿದ್ದಾರೆ. ನಾವು ಜಿಲ್ಲೆಯ ಕೆ.ಡಿ.ಪಿ. ಸಭೆಯಲ್ಲಿ ಈ ವಿಚಾರವಾಗಿ ಉಸ್ತುವಾರಿ ಮಂತ್ರಿಗಳ ಜೊತೆಗೆ ಚರ್ಚೆ ಮಾಡಿ ಈ ಎಂಟು ಜನರಿಗೆ ವಿಶೇಷ ವ್ಯವಸ್ಥೆ ಮಾಡಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿದ್ದರೂ ಕೂಡ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದನ್ನು ವಿಶೇಷ ರೀತಿಯಲ್ಲಿ ಪರಿಗಣನೆಗೆ ತೆಗೆದುಕೊಂಡು ಈ ಎಂಟು ಜನರಿಗೆ ಅಧ್ಯಾಪಕರ ಹುದ್ದೆಗೆ ಸಿಂಧುತ್ವ ಪತ್ರವನ್ನು ಕೊಟ್ಟು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ರಾಜ್ಯಸರ್ಕಾರ ನಿರ್ದೇಶನ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಯ್ದೀನ್ :— ಮಾನ್ಯ ಅಧ್ಯಕ್ಷರೆ, ಇದರಲ್ಲಿ ಒಂದು ಜಿಜ್ಞಾಸೆ ಇದೆ. ಇವರು ಕರ್ನಾಟಕದವಲ್ಲ, ಹೊರಗಿನ ಕಾಸರಗೋಡಿನವರೆನ್ನುವಂತಹ ವಿಚಾರವಿದೆ. ಈ ರೀತಿಯಾಗಿ ಡೆಪ್ಯೂಟಿ ಕಮೀಷನರ್‌ರವರು ನಿರ್ಧಾರಕ್ಕೆ ಬಂದಿದ್ದಾರೆ. ಈಗ ಇವರ ಅಪೀಲು ಡಿವಿಜನಲ್ ಕಮೀಷನರ್ ಹತ್ತಿರ ಹೋಗಿದೆ. ಅಲ್ಲಿ ಅವರ ಜಡ್ಜ್‌ಮೆಂಟ್ ಏನಾಗುತ್ತದೆಂದು ನೋಡಿಕೊಂಡು ಅದರ ಆಧಾರದ ಮೇಲೆ ನಾವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ :— ಇದು ಕಾನೂನಿಗೆ ಸಂಬಂಧಪಟ್ಟಂತಹ ವಿಚಾರವಾಯಿತು. ನಾನು ರಾಜ್ಯಸರ್ಕಾರದಲ್ಲಿ ವಿಶೇಷ ವ್ಯವಸ್ಥೆ ಮಾಡಿ ಇವರನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಹ್ಯಾಮ್ಲೆಟ್ ಯೋಜನೆಯಡಿಯಲ್ಲಿ ವಿದ್ಯುದ್ದೀಕರಣ ಕಾಮಗಾರಿ.

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೆ, ಹ್ಯಾಮ್ಲೆಟ್ ಸ್ಕೀಂನಲ್ಲಿ ಯಾವುದಾದರೂ ಗ್ರಾಮವನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಯಾವ ಆದ್ಯತೆಯ ಮೇಲೆ ಸರ್ಕಾರ ತೆಗೆದುಕೊಳ್ಳುತ್ತದೆಂಬ ಬಗ್ಗೆ ಗೊತ್ತಾಗುತ್ತಿಲ್ಲ. ಈ ಇಲಾಖೆಯ ಇಂಜಿನಿಯರ್‌ಗಳಿಂದ ಅಲ್ಲಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿಸಿ ಇಂಥಾದ್ದನ್ನು ಪ್ರಾರಂಭಿಕ ಹಂತದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ಕೂಡ ಅದನ್ನು ತೆಗೆದುಕೊಳ್ಳದೆ, ಯಾರಾದರೂ ಒತ್ತಡ ಹಾಕಿದರೆ ಅದನ್ನು ತೆಗೆದುಕೊಳ್ಳುವಂಥಾದ್ದು ಇದೆ. ಈಗ ಹ್ಯಾಮ್ಲೆಟ್ ಸ್ಕೀಂನಲ್ಲಿ ವಿದ್ಯುದ್ದೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದರಲ್ಲಿ ಆದ್ಯತೆ ನೀಡುವ ಬಗ್ಗೆ ಕಾರ್ಯಕಾರಿ ಅಭಿಯಂತರರು, ಮಂಗಳೂರು, ಇವರು ದಿ: 4-5-98 ರಲ್ಲಿ ಕಾಪ್ರಾಡಿ ಗ್ರಾಮದ ಅರಂಗಳ್ಯೆಲು,

ನೆಲ್ಯಾಡಿ ಗ್ರಾಮದ ಕೆಳಗಿನ ಬಲ್ಯಾ, ಹಿರೇಬಂಡಾಡಿ ಗ್ರಾಮದ ಪಟ್ಟರ್ಥಿ, ಚಿಕ್ಕ ಮೂದ್ನೂರು ಗ್ರಾಮವ ಏಕ, ತಿರಚನಪ್ಪಾಡಿ ಗ್ರಾಮದ ಒಡ್ಡೆತಡಕ, ಸಿರಿಬಾಗಿಲು ಗ್ರಾಮದ ಧೀರಣೆ, ಬನ್ನೂರು ಗ್ರಾಮದ ಬೇಡ್ಯಡ್ಕ, ಬೆಟ್ಟಂಪಾಡಿ ಗ್ರಾಮದ ಕಬ್ಬೂರು, ಇವೆಲ್ಲವನ್ನು ರೆಕಮೆಂಡ್ ಮಾಡಿ ಕಳುಹಿಸಿ ಒಂದೂವರೆ ವರ್ಷವಾದರೂ ಇನ್ನು ಅವರು ಅನುಷ್ಠಾನ ಮಾಡಿಲ್ಲ.

ಅಧ್ಯಕ್ಷರು :— ಸಂಬಂಧಿಸಿದ ಮಂತ್ರಿಗಳು ನನ್ನ ಅನುಮತಿಯನ್ನು ತೆಗೆದುಕೊಂಡು ವಿಧಾನಪರಿಷತ್ತಿಗೆ ಹೋಗಿದ್ದಾರೆ, ಉತ್ತರ ಲಭ್ಯವಿದ್ದಲ್ಲಿ, ಮಾನ್ಯ ಸದಸ್ಯರಿಗೆ ತಲುಪಿಸುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು) :— ಅವರಿಗೆ ಉತ್ತರವನ್ನು ತಲುಪಿಸುತ್ತೇವೆ.

(೪) ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆ ಡಾಂಬರೀಕರಣ.

ಶ್ರೀ ರೇವುನಾಯಕ್ ಬೆಳಮಾಗಿ (ಕಮಲಾಪುರ) :— ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ, ನಮ್ಮ ಕಮಲಾಪುರ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಕಳೆದ ಸಲ ಕೂಡ ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ತಾವು ಕೂಡ ಒಂದು ರೂಲಿಂಗ್ ಕೊಟ್ಟಿರಿ ಅದರ ಪ್ರಕಾರ ಲೋಕೋಪಯೋಗಿ ಸಚಿವರು ನನ್ನ ಬೆಳಂಗಿ ಹಾಗೂ ಆಳಂದ ರಸ್ತೆ ಮತ್ತು ಗುಲ್ಬರ್ಗಾ ಮಾಗಾಂವ್, ಬಸವಕಲ್ಯಾಣ ಮುಡಬಿ ರಸ್ತೆ, ಎರಡು ರಸ್ತೆಗಳನ್ನು ಇವರು ಕಣ್ಣಾರೆ ನೋಡಿ ಇವರು ಮಂಜೂರಾತಿಯನ್ನು ಕೂಡ ಕೊಟ್ಟಿದ್ದಾರೆ. ಅದಕ್ಕೆ ಎಸ್ಟಿಮೇಟ್ ಕೂಡ ಮಂಜೂರಾಗಿದೆ, ಟೆಕ್ನಿಕಲ್ ಮಂಜೂರಾಗಿ, ಧಾರವಾಡಕ್ಕೂ, ಕೂಡ ಬಂದಿದೆ. ಆದರೆ ನಾಲ್ಕು ತಿಂಗಳಾದವು ಟೆಂಡರ್ ಕರೆಯುತ್ತಿಲ್ಲ. ಅಲ್ಲಿ ಬಸವರಾಜ್ ಎನ್ನುವ ಒಬ್ಬ ಸೆಕ್ಷನ್ ಕ್ಲರ್ಕ್ ಇದ್ದಾನೆ, ಅವನು ಮಿಸ್‌ಗೈಡ್ ಮಾಡುತ್ತಿದ್ದಾರೆ. ಸೂಪರಿಂಟೆಂಡೆಂಟ್ ಇಂಜಿನಿಯರ್ ಅವನನ್ನು ಕರೆಯಿಸಿ ಸರ್ಕಾರಿ ಆದೇಶವಿದೆ ಟೆಂಡರ್ ಕರೆಯುವುದು ಎಂದು ಹೇಳಿದರೆ, ಅದಕ್ಕೆ ಹಣವಿಲ್ಲ, ರೊಕ್ಕವಿಲ್ಲವೆಂದು ವಿಳಂಬ ಮಾಡುತ್ತಿದ್ದಾನೆ. ನಾನು ಸಾಕಷ್ಟು ಸಲ ಮುಖ್ಯ ಅಭಿಯಂತರರನ್ನು ಕೂಡ ನಾನು ಭೇಟಿ ಮಾಡಿದ್ದೇನೆ, ಅವರೂ ಕೂಡ ಅವರಿಗೆ ದೂರವಾಣಿಯ ಮುಖಾಂತರ ಹೇಳಿದ್ದಾರೆ, ಆದರೂ ಇದುವರೆವಿಗು ಟೆಂಡರ್ ಕರೆಯುತ್ತಿಲ್ಲ. ನಾನು ಆ ಊರಿಗೆ ಹೋದರೆ ಜನರು, ಏನಪ್ಪ ಶಾಸಕರಾಗಿದ್ದುಕೊಂಡು ಇಂತಹ ರಸ್ತೆಯನ್ನು ಇಟ್ಟುಕೊಂಡಿದ್ದಾರೆಂದು ಛೀಮಾರಿ ಹಾಕುತ್ತಿದ್ದಾರೆ. ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ, ಆದಷ್ಟು ಬೇಗ ಟೆಂಡರ್ ಕರೆದು ಆ ರಸ್ತೆಗಳಿಗೆ ಡಾಂಬರೀಕರಣ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :— ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ, ಅದಕ್ಕೆ ಎಸ್ಟಿಮೇಟ್ ಆಗಿ ಅನುದಾನ ಲಭ್ಯವಿದ್ದರೆ ಟೆಂಡರ್ ಕರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.